ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,
ಯಳಂದೂರು.

# CC 312/2026

ಪಿರ್ಯಾದಿ : ರಾಜ್ಯದ ಪರವಾಗಿ ಸಂತೇಮರಹಳ್ಳಿ ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ : ರತ್ನಮ್ಮ ಕೋಂ ಲೇಟ್ ಮಹದೇವಸ್ವಾಮಿ, 50 ವರ್ಷ,
ಮಂಗಲ ಗ್ರಾಮ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ.

## :ಆಪಾದನಾ ನೀಡಿಕೆ:

ಶ್ರೀ ಸುಜಾತ ಹೆಚ್, ಎಲ್,ಎಲ್,ಎಂ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಯಳಂದೂರು ಆದ ನಾನು ನಿನ್ನನ್ನು ಈ ಕೆಳಕಂಡ ಆರೋಪಗಳಿಗೆ ಗುರಿಪಡಿಸುತ್ತೇನೆ.

ದಿನಾಂಕ: 04.03.2026 ರಂದು ಸಂಜೆ 6.00 ಗಂಟೆ ಸಮಯದಲ್ಲಿ ಸಂತೇಮರಹಳ್ಳಿ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಮಂಗಲ ಗ್ರಾಮದ ಮಂಗಲಹೊಸೂರು ರಸ್ತೆಯಲ್ಲಿರುವ ಶ್ರೀ ಶನೇಶ್ವರಸ್ವಾಮಿ ದೇವಸ್ಥಾನದ ಹತ್ತಿರ ಸಾರ್ವಜನಿಕ ರಸ್ತೆಯಲ್ಲಿ ಆರೋಪಿಯಾದ ನೀನು ಕಾನೂನು ಬಾಹಿರವಾಗಿ ಯಾವುದೇ ರಹದಾರಿಯಿಲ್ಲದೆ ಒಂದು ಬಟ್ಟೆ ಬ್ಯಾಗಿನಲ್ಲಿ ಸುಮಾರು 90 ಎಂ.ಎಲ್ ಸಾಮರ್ಥ್ಯದ ಮದ್ಯ ತುಂಬಿದ ಹೈವಾರ್ಡ್ಸ್ ಚಿಯರ್ಸ್ ವಿಸ್ಕಿಯ 18 ಟೆಟ್ರಾಪ್ಯಾಕ್‌ಗಳನ್ನು, ಕೈಯಲ್ಲಿ 10 ಖಾಲಿ ಪ್ಲಾಸ್ಟಿಕ್ ಲೋಟಗಳನ್ನು ಹಿಡಿದುಕೊಂಡು ದಾರಿಯಲ್ಲಿ ಓಡಾಡುವ ಜನರನ್ನು ಕೂಗಿ ಕರೆಯುತ್ತಾ ಸಾರ್ವಜನಿಕರಿಗೆ ಮದ್ಯಪಾನ ಮಾಡಲು ಅವಕಾಶ ನೀಡುತ್ತಿದ್ದ ಈ ನಿನ್ನ ಕ್ರಮವು **ಕರ್ನಾಟಕ ಅಬಕಾರಿ ಕಾಯಿದೆಯ ಕಲಂ.15(ಎ) ಮತ್ತು 32(3)** ರ ಅಡಿಯಲ್ಲಿ ಅಪರಾಧ ಎಸಗಿರುವುದಾಗಿ ಆರೋಪಿಸಲಾಗಿದೆ.

(ಆರೋಪಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನಗೆ ಸ್ವತಃ ಹೇಳುವ ಹಾಗೆ ಪಡೆಯಲಾಗಿದ್ದು ಆರೋಪಿಯು ನುಡಿದ ಪೂರ್ಣ ಹಾಗೂ ಸತ್ಯವಾದ ಹೇಳಿಕೆಯನ್ನು ಈ ಬರಹವು ಒಳಗೊಂಡಿದೆ ಎಂದು ಈ ಮೂಲಕ ಧೃಡೀಕರಿಸುತ್ತೇನೆ.)

ದಿನಾಂಕಃ 05.08.2026.

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ಯಳಂದೂರು.

ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಳಂದೂರು.

**CC 312/2026**

ಪಿರ್ಯಾದಿ : ರಾಜ್ಯದ ಪರವಾಗಿ ಯಳಂದೂರು ಪೋಲೀಸ್ ಠಾಣೆ

**ವಿರುದ್ಧ**

ಆರೋಪಿ : ರತ್ನಮ್ಮ ಕೋಂ ಲೇಟ್ ಮಹದೇವಸ್ವಾಮಿ, 50 ವರ್ಷ,
ಮಂಗಲ ಗ್ರಾಮ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ.

**:ಆಪಾದನಾ ನೀಡಿಕೆ:**

ಪ್ರಶ್ನೆ 1: ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೆ?

ಉತ್ತರ:

ಪ್ರಶ್ನೆ 2: ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮ್ಮ ಪ್ರತಿವಾದ ಇದೆಯೆ?

ಉತ್ತರ:

(ಮೇಲೆ ಪಡೆದ ಆರೋಪಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನಗೆ ಸ್ವತಃ ಹೇಳುವ ಹಾಗೆ ಪಡೆಯಲಾಗಿದ್ದು ಆರೋಪಿಯು ನುಡಿದ ಪೂರ್ಣ ಹಾಗೂ ಸತ್ಯವಾದ ಹೇಳಿಕೆಯನ್ನು ಈ ಬರಹವು ಒಳಗೊಂಡಿದೆ ಎಂದು ಈ ಮೂಲಕ ಧೃಡೀಕರಿಸುತ್ತೇನೆ.)

ದಿನಾಂಕಃ 05.08.2026.

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ಯಳಂದೂರು.